ಮೀನುಗಾರಿಕೆ ಅಭಿವೃದ್ಧಿ ನಿಗಮದ ಮಂಜೇನವಾಗಲೀ ಮೀನು ಮಾರಾಟ ಮಾಡಿದ್ದಲ್ಲಿ ಅಥವಾ ಅಲ್ಲಿಂದ ಡೀಸೆಲ್ ಖರೀದಿಸಿದ್ದಲ್ಲಿಲಾಗ ಪುಸ್ತಕ ಇಡುವುದು ಮತ್ತು ನಗದು ಬಿಲ್‌ಗಳನ್ನು ಹಾಜರು ಪಡಿಸುವ ಪರತ್ತುಗಳನ್ನು ಕೈಬಿಡಲಾಗಿತ್ತು. ಈ ವರ್ಷ ಕೂಡ ಇದೇ ರೀತಿ ಮುಂದುವರಿಸುವ ಯೋಚನೆ ಇದೆ. ಆದುದರಿಂದ, ಈ ವರ್ಷದಲ್ಲಿ ೭೦ ಲಕ್ಷದಷ್ಟು ಸಹಾಯಧನ ನೀಡುವ ಅಂದಾಜು ಇದೆ.

ಈ ಯೋಜನೆಯಿಂದ ಕರಾವಳಿಯ ಮೀನುಗಾರರ ಸಂಕಷ್ಟಗಳು ಪರಿಹಾರವಾಗುತ್ತವೆ ಎಂದು ನಾನು ಆಶಿಸುತ್ತೇನೆ.

iii) ರಾಜ್ಯದಾದ್ಯಂತ ದರೋಡೆಗಳು ಜಾಸ್ತಿಯಾಗಿರುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು),— ಮಾನ್ಯ ಅಧ್ಯಕ್ಷರೇ ಕರ್ನಾಟಕಾದ್ಯಂತ ದರೋಡೆ ಮತ್ತು ಗಲಭೆಗಳು ಜಾಸ್ತಿಯಾಗಿವೆ. ಕೋಲಾರ ನಗರದಲ್ಲಿ ಪಾಲಸಂದ್ರ ಲೇಔಟ್‌ನಲ್ಲಿ ಕೂಡ ಇಂತಹ ದರೋಡೆ ನಡೆದು ಅಲ್ಲಿನ ಮನೆಯಲ್ಲಿದ್ದವರಿಗೆ ಏಟುಗಳು ಬಿದ್ದು ಮನೆ ದೋಚಲ್ಪಟ್ಟಿತ್ತು. ಆದುದರಿಂದ ಮತ್ತೆ ದಿನವಿಡೀ ಈ ಗಲಭೆಗಳು ಜಾಸ್ತಿಯಾಗುತ್ತಿರುವುದರಿಂದ ಈ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.— ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ ಆ ಗ್ಯಾಂಗ್‌ನವರು ಆಂಧ್ರಪ್ರದೇಶದಿಂದ ಬಂದವರು ಎಂದು ಗೊತ್ತಾಗಿದೆ. ಈ ಬಗ್ಗೆ ತನಿಖೆ ಮಾಡಲು ಅಧಿಕಾರಿಗಳನ್ನು ಕಳುಹಿಸಿದ್ದೇನೆ. ಮಾನ್ಯ ಸದಸ್ಯರು ಅತ್ಯಾಚಾರ ಮತ್ತು ದರೋಡೆಗಳು ಜಾಸ್ತಿಯಾಗುತ್ತಿವೆ ಎನ್ನುವ ಮಾತನ್ನು ಹೇಳಿಸಿದ್ದಾರೆ. ಬಹುಶಃ ಈಗ ಸ್ವಲ್ಪಮಟ್ಟಿಗೆ ಕಡಿವಾಣಾಗುತ್ತಿವೆ. ಸರ್ಕಾರ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಸಹ ತೆಗೆದುಕೊಂಡಿದೆ. ೧೯೮೪ನೇ ಇಸವಿಯಲ್ಲಿ ೨೨೧ ಡಕಾಯಿತಿಗಳು ನಡೆದಿದ್ದರೆ ಅದರಲ್ಲಿ ೮೪ ಕೇಸುಗಳು ಪತ್ತೆಯಾಗಿವೆ. ಅದೇ ರೀತಿಯಲ್ಲಿ ೧೯೮೫ನೇ ಇಸವಿಯಲ್ಲಿ ೧೫೪ ಡಕಾಯಿತಿಗಳು ನಡೆದಿದ್ದರೆ ೮೩ ಕೇಸುಗಳು ಪತ್ತೆಯಾಗಿವೆ. ಅದೇ ರೀತಿಯಲ್ಲಿ ೧೯೮೬ರಲ್ಲಿ ೨೨೨ ಡಕಾಯಿತಿಗಳು ನಡೆದಿದ್ದರೆ ೮೮ ಕೇಸುಗಳು ಪತ್ತೆಯಾಗಿವೆ. ಈ ವರ್ಷ ಕಳೆದ ಎರಡು ತಿಂಗಳಿಂದ ೨ ಡಕಾಯಿತಿಗಳು ನಡೆದಿದ್ದು ಎರಡೂ ಕೇಸುಗಳು ಪತ್ತೆಯಾಗಿವೆ. ನಾನು ಈ ಮಾತನ್ನು ಹೇಳಿದರೆ ಮಾನ್ಯ ಸದಸ್ಯರು, ಮಂತ್ರಿಗಳು ಮಾಮೂಲು ಉತ್ತರವನ್ನು ಹೇಳುತ್ತಾರೆಂದು ಹೇಳುತ್ತಾರೆ. ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಸಿಬ್ಬಂದಿ ಈಗಿನ ಜನಸಂಖ್ಯೆಗೆ ಅನುಗುಣವಾಗಿಲ್ಲ. ಪೋಲೀಸ್‌ನವರು ಬಹಳ ಕಡಿಮೆ ಜನ ಇದ್ದಾರೆ. ಒಬ್ಬ ಪೋಲೀಸಿನವರಿಗೆ ೧೬೨೪ ಜನ ಬರುತ್ತಾರೆ. ಪೋಲೀಸಿನವರಿಗೆ ಬೇಕಾದಂತಹ ಎಲ್ಲಾ ರೀತಿಯ ಮೊಬಿಲಿಟಿಯನ್ನು ಒದಗಿಸಿಕೊಟ್ಟು ರಾತ್ರಿ ವೇಳೆಯಲ್ಲಿ ಹೆಚ್ಚು ಹೆಚ್ಚು ಗಸ್ತು ಮಾಡಲು ಆದೇಶ ಕೊಟ್ಟಿದ್ದೇನೆ, ಕೋಲಾರದಲ್ಲಿ ನಡೆದಿರುವ ಘಟನೆ ಇಂಟರ್ ಸ್ಟೇಟ್‌ನವರಿಂದ ಮಾಡಿರುವುದರಿಂದ ಅಲ್ಲಿನ ಪೋಲೀಸ್‌ನವರ ಸಹಾಯ ಕೂಡ ಪಡೆಯಬೇಕಾಗುತ್ತದೆ. ಇಂಟರ್‌ಸ್ಟೇಟ್ ಪೋಲೀಸ್ ಅಧಿಕಾರಿಗಳ ಸಹಾಯ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

iv. ವಜಾ ಆಗಿರುವ ಜೂನಿಯರ್ ಕಾಲೇಜಿನ ೧೮೯ ಗುತ್ತಿಗೆ ಉಪನ್ಯಾಸಕ ಮರುನೇಮಕ ಮಾಡಲು ಮನವಿ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ದಿನಾಂಕ ೪-೨-೮೭ ರಂದು ಸನ್ಮಾನ್ಯ ಶಿಕ್ಷಣ ಸಚಿವರು ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರು ಹಾಗೂ ಅನೇಕ ಗೌರವಾನ್ವಿತ ಶಾಸಕರು ಪರಸ್ಪರ ಸಮಾಲೋಚಿಸಿ, ತಾವೆಲ್ಲರೂ ಕಬ್ಬನ್ ಪಾರ್ಕಿಗೆ ಹೋಗಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾಡಿದ ಕಳಕಳಿಯ ಆದರಣೀಯ ಮನವಿಯ ಆಧಾರದ ಮೇಲೆ ಪುನರ್ ನೇಮಕ ಮಾಡಿಕೊಂಡು ಎಲ್ಲಾ ಗುತ್ತಿಗೆ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ನ್ಯಾಯ ದೊರಕಿಸಲು ಶೀಘ್ರದಲ್ಲಿಯೇ ಸಂಪುಟದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದೆಂಬ'' ತಮ್ಮ ಆಶ್ವಾಸನೆಯ ಮೇರೆಗೆ ಆ ದಿನವೇ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಅವರು ಹಿಂತೆಗೆದುಕೊಂಡರು.